ರೈತರ ಜೊತೆಗೆ ಬೆಳೆ ನಷ್ಟ ಪರಿಹಾರದ ಮೊತ್ತವನ್ನು ಇಷ್ಟರಲ್ಲೇ ಜಮಾ ಮಾಡಲು ಕ್ರಮ ಕೈಗೊಂಡಿರುತ್ತದೆ. ಬೆಳೆವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಬೆಳಗಾವಿ ಕಾಡಾ ರಸ್ತೆಗಳ ದುರಸ್ತಿ ಮಾಡುವುದರ ಬಗ್ಗೆ

4242 (4903) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಕಾಡಾ ರಸ್ತೆಗಳ ದುರಸ್ತಿಗಾಗಿ ಕಳೆದ ವರ್ಷದ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿತ್ತು; ಹಗೂ ಎಷ್ಟು ಹಣ ಖರ್ಚಾಗಿರುವುದು;

ಆ) ಕಾಡಾ ರಸ್ತೆಗಳನ್ನು ದುರಸ್ತಿ ಮಾಡದೇ ಇರುವುದರಿಂದ ರೈತರಿಗೆ ತಮ್ಮ ತಮ್ಮ ಹೊಲಗಳಿಗೆ ಮನೆಗಳಿಗೆ ಹೋಗಲು ತುಂಬಾ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಎಷ್ಟು ಕಿ.ಮೀ ಕಾಡಾ ರಸ್ತೆ ಇರುತ್ತದೆ;

ಈ) ಈ ರಸ್ತೆಯನ್ನು ದುರಸ್ತಿ ಮಾಡಲು ಸರ್ಕಾರ ಯಾವ ವಿಶೇಷವಾದ ಕ್ರಮ ಹಮ್ಮಿ ಕೊಳ್ಳುವುದು?

ಶ್ರೀ ಹೆಚ್. ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಕಾಡಾ ಕಾರ್ಯಕ್ರಮಗಳಡಿಯಲ್ಲಿ ರಸ್ತೆ ದುರಸ್ತಿ ಕೈಗೊಳ್ಳಲು ಅವಕಾಶವಿಲ್ಲದಿರುವುದರಿಂದ ಆಯವ್ಯಯದಲ್ಲಿ ಅನುದಾನ ನಿಗದಿಪಡಿಸಿರಲಿಲ್ಲ.

ಆ) ಬಂದಿದೆ.

ಇ) ಬೈಲಹೊಂಗಲ ತಾಲ್ಲೂಕು ಮತ್ತು ಸವದತ್ತಿ ತಾಲ್ಲೂಕುಗಳಲ್ಲಿ ಅನುಕ್ರಮವಾಗಿ 34,70 ಕಿ.ಮೀ ಮತ್ತು 60,62 ಕಿ.ಮೀ ಕಾಡಾ ರಸ್ತೆ ಇರುತ್ತದೆ.

ಈ) 2003–04 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 3054ರ ಅಡಿಯಲ್ಲಿ ರೂ. 100.00 ಲಕ್ಷಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು, ಈ ಹಣದಿಂದ ಮುಖ್ಯ ಇಂಜಿನಿಯರ್, ನೀರಾವರಿ ಉತ್ತರ ವಲಯ, ಬೆಳಗಾಂ ಇವರ ಮೂಲಕ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು.

ಕೃಷಿ ಇಲಾಖೆಯಲ್ಲಿ ಸಹಾಯಕ ಕೃಷಿ ಅಧಿಕಾರಿಗಳಾಗಿ ಬಡ್ತಿ ನೀಡುವಾಗ ಶಾಸನಬದ್ಧ ನಿಯಮವನ್ನು ಅನುಷ್ಠಾನಗೊಳಿಸುವ ಬಗ್ಗೆ

4243 (4880) : ಶ್ರೀ ವಿ. ಕೃಷ್ಣಪ್ಪ (ದೊಡ್ಡಬಳ್ಳಾಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಇಲಾಖೆಯಲ್ಲಿ ಸಹಾಯಕ ಕೃಷಿ ಅಧಿಕಾರಿಗಳ ಬಡ್ತಿ ನೀಡುವಾಗ 1984ರ ಶಾಸನಬದ್ಧ ನಿಯಮವನ್ನು ಅನುಷ್ಠಾನಗೊಳಿಸಲಾಗಿದೆಯೇ?

ಆ) 1976ರ ಶಾಸನಬದ್ಧ ನಿಯಮದಲ್ಲಿ ಫೀಲ್ಡ್ ಅಸಿಸ್ಟೆಂಟ್‌ಗಳಿಗೆ ಗ್ರಾಮೀಣ ಅಭಿವೃದ್ಧಿ ತರಬೇತಿ ಅವಶ್ಯಕತೆ ಇತ್ತೇ? ತರಭೇತಿಯನ್ನು ನೀಡಲಾಗಿದೆಯೇ?

ಇ) ಫೀಲ್ಡ್ ಅಸಿಸ್ಟೆಂಟ್ ರವರ ನೇಮಕಾತಿ 1976 ಶಾಸನಬದ್ಧ ನಿಯಮದಲ್ಲಿ ಮುಂದುವರೆದಿತ್ತೇ? ಮುಂದುವರಿಯದಿದ್ದಲ್ಲಿ, ನೇಮಕಾತಿ ಮಾಡಿರುವುದಕ್ಕೆ ಕಾರಣಗಳೇನು?

ಈ) ಉಚ್ಚ ನ್ಯಾಯಾಲಯದ ದಿನಾಂಕ : 2–3–81ರ ತೀರ್ಪನ್ನು ಮಾನ್ಯತೆ ನೀಡಲಾಗಿದೆಯೇ?

ಉ) ಗ್ರಾಮ ಸೇವಕ, ಕೃಷಿ ಸಹಾಯಕರ, ಫೀಲ್ಡ್ ಅಸಿಸ್ಟೆಂಟ್, ಫೀಲ್ಡ್ ಮನ್‌ಗಳ ಜೇಷ್ಠತಾ ಪಟ್ಟಿಯನ್ನು ಸರ್ವೋಚ್ಚ ನ್ಯಾಯಾಲಯದ ದಿನಾಂಕ : 16-1-2001 ರ ತೀರ್ಪಿನಂತೆ ಅಂತಿಮಗೊಳಿಸಲಾಗಿದೆಯೇ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಹೌದು, ಅನುಷ್ಠಾನಗೊಳಿಸಲಾಗಿದೆ.

ತರುವಾಯ, ಕರ್ನಾಟಕ ಆಡಳಿತ ನ್ಯಾಯಮಂಡಳಿಯು ನೀಡಿದ ತೀರ್ಪಿನ ಅನುಸಾರ ಬಡ್ತಿ ನೀಡಲಾಗಿರುತ್ತದೆ.

ಆ) ಅವಶ್ಯಕತೆ ಇತ್ತು.

ತರಭೇತಿಯನ್ನು ನೀಡಲಾಗಿರುತ್ತದೆ.

ಇ) ಮುಂದುವರೆದಿತ್ತು

ಸರ್ಕಾರದ ಆದೇಶ ಸಂಖ್ಯೆ : AAH 73 AEM 77 ದಿನಾಂಕ : 2-8-78 ರನ್ವಯ ಫೀಲ್ಡ್ ಅಸಿಸ್ಟೆಂಟ್‌ಗಳನ್ನು ಕೃಷಿ ಸಹಾಯಕರೆಂದು ಮರು ಪದನಾಮಗೊಳಿಸಿದೆ. ಈ ದಿನಾಂಕದ ತರುವಾಯ ಫೀಲ್ಡ್ ಅಸಿಸ್ಟೆಂಟ್ ನೇಮಕಾತಿಗೆ ಬದಲಾಗಿ ಕೃಷಿ ಸಹಾಯಕರನ್ನು ನೇಮಕ ಮಾಡಲಾಗಿದೆ.

ಈ) ಹೌದು, ಮಾನ್ಯತೆ ನೀಡಿದೆ.

ಉ) ಹೌದು.

ಸರ್ವೋಚ್ಚ ನ್ಯಾಯಾಲಯದ ದಿನಾಂಕ : 16-1-2001 ರ ತೀರ್ಪಿನಂತೆ ಕೃಷಿ ಸಹಾಯಕರ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ, ದಿನಾಂಕ : 27-5-2003ರಂದು ಪ್ರಕಟಿಸಲಾಗಿದೆ.

ತುರುವೇಕೆರೆಯಲ್ಲಿ ಖಾದಿ ಗ್ರಾಮೋದ್ಯೋಗ ಕಸುಬುದಾರರ ಕೈಗಾರಿಕಾ ಸಹಕಾರ ಸಂಘಕ್ಕೆ ಸೌಲಭ್ಯ ನೀಡದಿರುವ ಬಗ್ಗೆ

4244 (4763) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ಖಾದಿ ಗ್ರಾಮೋದ್ಯೋಗ ಕಸುಬುದಾರರ ಕೈಗಾರಿಕೆ ಸಹಕಾರ ಸಂಘ ಎಂದು ಪ್ರಾರಂಭವಾಯಿತು;

ಆ) ಹಾಗಿದ್ದಲ್ಲಿ; ಇಷ್ಟು ವರ್ಷ ಈ ಸಂಘ ಯಾವುದೇ ವಹಿವಾಟು ಮಾಡದಿರಲು ಕಾರಣವೇನು

ಇ) ಸಾರ್ವಜನಿಕರಿಗೆ ಇದರಿಂದ ಯಾವ್ಯಾವ ಪ್ರಯೋಜನಗಳು ದೊರೆಯುತ್ತದೆ;

ಈ) ಸರ್ಕಾರ ಈ ಸಂಘಕ್ಕೆ ಯಾವುದೇ ಸೌಲಭ್ಯ ಕೊಡದಿರಲು ಕಾರಣವೇನು;

ಉ) ಬರಗಾಲ ಬಂದಿರುವ ಈ ಸಂದರ್ಭದಲ್ಲಿ ಸಣ್ಣ ಪ್ರಮಾಣದ ಕಸುಬುದಾರರಿಗೆ ಸಾಲ ಸೌಲಭ್ಯಗಳು ಇಲ್ಲದೇ ತೊಂದರೆಯಾಗಿರುವ ಸಮಯದಲ್ಲಿ ಇಲಾಖೆ ಸ್ಪಂದಿಸಿ ಎಲ್ಲಾ ಸವಲತ್ತುಗಳನ್ನು ತಕ್ಷಣ ಒದಗಿಸುವುದೇ?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ) 1954ರಲ್ಲಿ ಪ್ರಾರಂಭವಾಯಿತು.

ಆ) ಆರ್ಥಿಕ ಮುಗ್ಗಟ್ಟಿನಿಂದ ಸಂಘವು ಹೆಚ್ಚಿನ ವಹಿವಾಟು ಮಾಡಿರುವುದಿಲ್ಲ.